




# ಕೊಯಂಬತ್ತೂರು ರಾಮಕೃಷ್ಣ ಮಿಷನ್ ವಿದ್ಯಾಲಯದಲ್ಲಿ ನೂತನ ಶ್ರೀರಾಮಕೃಷ್ಣ ಮಂದಿರದ ಉದ್ಘಾಟನೆ

ಕೊಯಂಬತ್ತೂರು ರಾಮಕೃಷ್ಣ ಮಿಷನ್ ವಿದ್ಯಾಲಯದಲ್ಲಿ ಶ್ರೀಮತ್ ಸ್ವಾಮಿ ಶಾರದಾನಂದಜಿ ಮಹಾರಾಜ್ ಅವರ ಜಯಂತಿಯ ಶುಭ ಸಂದರ್ಭದಲ್ಲಿ , ೨೦೨೪ರ ಜನವರಿ ೧೬ರಂದು ಭಗವಾನ್ ಶ್ರೀರಾಮಕೃಷ್ಣರ ನೂತನ ದೇವಾಲಯವನ್ನು ಉದ್ಘಾಟಿಸಲಾಯಿತು. ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾದ ಶೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಉದ್ಘಾಟನೆಯನ್ನು ನೆರವೇರಿಸಿದರು.

ಈ ವಿಶೇಷ ಸಂದರ್ಭದಲ್ಲಿ ಜನವರಿ ೧೫ ರಿಂದ ೧೭ರ ವರೆಗೆ ಮೂರು ದಿನಗಳ ಕಾರ್ಯಕ್ರಮಗಳು ನಡೆದವು. ಸುಮಾರು ೩೨೦ ಮಂದಿ ಸಂನ್ಯಾಸಿಗಳು ಹಾಗೂ ೧೧,೦೦೦ ಭಕ್ತರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

**ದಿನಾಂಕ ೧೫:** ರಾಮಕೃಷ್ಣ ಮಿಷನ್ ವಿದ್ಯಾಲಯದ ಧ್ವಜಾರೋಹಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಾಂಪ್ರದಾಯಿಕ ಯಜ್ಞಶಾಲೆಯಲ್ಲಿ ವೈದಿಕ ಕ್ರಿಯೆಗಳು, ಅಪರಾಹ್ನ ನಾಮ ಸಂಕೀರ್ತನೆ, ಸಂನ್ಯಾಸಿಗಳಿಂದ ಹಾಗೂ ವಿದ್ವಾಂಸರಿಂದ ಪ್ರವಚನಗಳು, ಸಾಂಪ್ರದಾಯಿಕ ಶೈಲಿಯಲ್ಲಿ 'ತೇವಾರಂ' ಗಾಯನ ಹಾಗೂ ಶ್ರೀಮಾತೆ ಶಾರದಾದೇವಿಯವರ ಜೀವನವನ್ನು ಕುರಿತ ಸಂಗೀತ ರೂಪಕ ಇವಿಷ್ಟು ಕಾರ್ಯಕ್ರಮಗಳು ನಡೆದವು.

**ದಿನಾಂಕ ೧೬:** ಈ ದಿನ ಪ್ರಾತಃಕಾಲ ೬-೩೦ ರಿಂದ 'ಕುಂಭಾಭಿಷೇಕ' ಕಾರ್ಯಕ್ರಮಗಳು ಆರಂಭಗೊಂಡವು. ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರ ನೇತೃತ್ವದಲ್ಲಿ ನೂತನವಾಗಿ ನಿರ್ಮಿತವಾದ ದೇವಾಲಯದ ಸುತ್ತ ಪ್ರದಕ್ಷಿಣೆ, ಬಳಿಕ ಪ್ರಧಾನದ್ವಾರದ ಮೂಲಕ ಪ್ರವೇಶ ಮಾಡುವ ಮೂಲಕ ದೇವಾಲಯದ ಉದ್ಘಾಟನೆ ನಡೆಯಿತು. ಸಂನ್ಯಾಸಿಗಳು ಹಾಗೂ ಭಕ್ತರು ಈ ಶುಭ ಸಮಾರಂಭವನ್ನು ವೀಕ್ಷಿಸಿದರು ಹಾಗೂ 'ಕುಂಭಾಭಿಷೇಕ ಜಲ'ದ ಪ್ರೋಕ್ಷಣೆಯನ್ನು ಸ್ವೀಕರಿಸಿದರು.

ಬೆಳಿಗ್ಗೆ ೧೦-೪೫ಕ್ಕೆ ಸಾರ್ವಜನಿಕ ಸಭೆ ನಡೆಯಿತು. ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ 'ಸೌರಭಂ' ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಅನಂತರ ಯತಿಪೂಜೆ ನಡೆಯಿತು. ಸಾಯಂಕಾಲ ನಾಮಸಂಕೀರ್ತನೆ, ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

**ದಿನಾಂಕ ೧೭:** ದೇವಾಲಯದಲ್ಲಿ ಶ್ರೀರಾಮಕೃಷ್ಣರಿಗೆ ವಿಶೇಷ ಪೂಜೆ, ಅನಂತರ ಶ್ರೀ ಶ್ರೀ ಚಂಡೀಹೋಮ ನೆರವೇರಿದವು. ಅನಂತರ ಪ್ರವಚನ, ಹರಿಕಥೆ, ವಿಷ್ಣುಸಹಸ್ರನಾಮ ಪಾರಾಯಣ ಮುಂತಾದ ಕಾರ್ಯಕ್ರಮಗಳು ನಡೆದವು. ಕೊನೆಯಲ್ಲಿ ನಡೆದ 'ಪಲ್ಲಕ್ಕಿ ಉತ್ಸವ'ದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಯಿತು. ಸಂನ್ಯಾಸಿಗಳು, ಭಕ್ತರು ಹಾಗೂ ಆಶ್ರಮದ ಸಿಬ್ಬಂದಿವರ್ಗದವರು ಭಜನೆ, ಕೀರ್ತನೆಗಳನ್ನು ಹಾಡುತ್ತಾ ಈ ಮೆರವಣಿಗೆಯಲ್ಲಿ ಪಾಲ್ಗೊಂಡರು. ಇದರೊಂದಿಗೆ ಮೂರು ದಿನಗಳ ಕಾರ್ಯಕ್ರಮಗಳು ಕೊನೆಗೊಂಡವು.





Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020